CW : 8
PW : 7

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.982/2019

| | | |
|---|---|---|
| ಸಾಕ್ಷಿದಾರರ ಹೆಸರು | : | ನಿರಂಜನ್ |
| ತಂದೆಯ ಹೆಸರು | : | ಓಡಿಯಪ್ಪ ಗೌಡ |
| ಪ್ರಾಯ | : | 39 |
| ಉದ್ಯೋಗ | : | ಕೃಷಿ |
| ವಾಸಸ್ಥಳ | : | ಉಪ್ಪಿನಂಗಡಿ |
| ದಿನಾಂಕಃ 10.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |
| | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನ್ನ ಸಮಕ್ಷಮ ಯಾವುದೇ ಮಹಜರು ಕ್ರಮ ಜರುಗಿಸಿರುವುದಿಲ್ಲ ಮತ್ತು ಪೋಲೀಸರು ನನ್ನ ಸಮಕ್ಷಮ ಯಾವುದೇ ಸೊತ್ತನ್ನು ವಶಪಡಿಸಿಕೊಂಡಿರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ 4 ದಾಖಲೆಗೆ ಸಹಿ ಮಾಡಿದ್ದು, ಅವುಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಸಾಕ್ಷಿಯು ಅವುಗಳು ಮಹಜರು ಮತ್ತು ಸೊತ್ತು ಸ್ವಾಧೀನತಾ ಮಹಜರು ಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ2(ಬಿ)** ಎಂದು ಗುರುತಿಸಲಾಯಿತು. ಸೊತ್ತು ಸ್ವಾಧೀನತಾ ಮಹಜರುಗಳನ್ನು **ನಿಪಿ15 ರಿಂದ 17** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ15(ಎ) ಯಿಂದ 17(ಎ)** ಎಂದು ಗುರುತಿಸಲಾಯಿತು. ನನಗೆ 2 ಮತ್ತು 3 ನೇ ಆರೋಪಿ ಗೊತ್ತಿಲ್ಲ. 6ನೇ ಆರೋಪಿ ಗೊತ್ತು. ಅವರಿಂದ ಪೋಲೀಸರು ಯಾವುದೇ ಸೊತ್ತನ್ನು ವಶಪಡಿಸಿಕೊಂಡಿರುವುದಿಲ್ಲ.

CW : 8
PW : 7

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು)**

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಿಪಿ2 ಕ್ಕೆ ದಿಃ30.07.2018 ರಂದು ಕಸಬ ಗ್ರಾಮದ ಬಪ್ಪಳಿಗೆ ಉಳ್ಳಾಲ್ತಿ ರಸ್ತೆ ಬದಿಯಲ್ಲಿ ಹಲ್ಲೆಯ ಸಂಬಂಧ ಮಹಜರು ಮಾಡುವಾಗ ನಾನು ಸಹಿ ಮಾಡಿದ್ದು, ಆಗ KA19MC7924 ಕಾರು, 6 ಮರದ ಸೊಂಟೆಗಳನ್ನು, ಕಾರಿನ ಗ್ಲಾಸ್ ಚೂರುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ2 ನ್ನು ಓದಿ ತಿಳಿದುಕೊಂಡು ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ15 ಕ್ಕೆ ದಿಃ31.07.2018 ರಂದು 6 ನೇ ಆರೋಪಿ ಪಂಚರಾದ ನಮ್ಮ ಸಮಕ್ಷಮ ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲ್ ನ್ನು KA21Q7520 ಹಾಜರುಪಡಿಸಿದ್ದು, ನಿಪಿ15ನ್ನು ತಯಾರಿಸಿದ್ದು, ಓದಿ ತಿಳಿದುಕೊಂಡು ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ31.07.2018 ರಂದು 2 ನೇ ಆರೋಪಿ ಪಂಚರಾದ ನಮ್ಮ ಸಮಕ್ಷಮ ಕೃತ್ಯಕ್ಕೆ ಉಪಯೋಗಿಸಿದ ಕಾರು ಸಂಖ್ಯೆಃKA21N0540 ನ್ನು ಹಾಜರುಪಡಿಸಿದ್ದು, ನಿಪಿ16ನ್ನು ತಯಾರಿಸಿದ್ದು, ಓದಿ ತಿಳಿದುಕೊಂಡು ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ31.07.2018 ರಂದು 3 ನೇ ಆರೋಪಿ ಪಂಚರಾದ ನಮ್ಮ ಸಮಕ್ಷಮ ಕೃತ್ಯಕ್ಕೆ ಉಪಯೋಗಿಸಿದ ಕಾರು ಸಂಖ್ಯೆಃKA19MV7281 ನ್ನು ಹಾಜರುಪಡಿಸಿದ್ದು, ನಿಪಿ17ನ್ನು ತಯಾರಿಸಿದ್ದು, ಓದಿ ತಿಳಿದುಕೊಂಡು ಅಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

CW : 8
PW : 7

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು